ಪ್ರಕಾರ ನಡೆಯಬೇಕು. ಲಫ್ಟ್ ಇರಿಗೇಷನ್‌ಗೆ ಅಲ್ಟರ್‌ನೇಟಿವ್ ಪ್ರಪೋಸಲ್‌ಗಾಗಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಿದೆಯೇ ಎಂದು ಕೇಳಿದ್ದಾರೆ. ಚೀಫ್ ಎಂಜಿನಿಯರು ಅದನ್ನು ಎಗ್ಸಾಮಿನ್ ಮಾಡುತ್ತಿದ್ದಾರೆ.

ಶ್ರೀ ಬಿ. ಎನ್. ರಾಮೇಗೌಡ.—ಈ ಪ್ರಾಜೆಕ್ಟನ್ನು ಭಾರತ ಸರಕಾರದ ಪರಿಶೀಲನೆಗೆ ಕಳಿಸಿ ಎಷ್ಟು ಕಾಲವಾಯ್ತು ?

ಶ್ರೀ ಡಿ. ಪರಮೇಶ್ವರಪ್ಪ.—1968ರಲ್ಲಿ ಕಳಿಸಿದೆ. ಆ ಬಗ್ಗೆ ಒತ್ತಾಯಮಾಡುತ್ತಿದ್ದೇವೆ. ಬೇಗ ಕ್ಲಿಯರೆನ್ಸ್ ಕೊಡಬೇಕೆಂದು ಕೇಳುತ್ತಿದ್ದೇವೆ. ಆದರೆ ಕೆಲವು ಅಬ್ಜರ್ವೇಷನ್ಸ್ ಮಾಡಿ ವಾಪಸ್ ಕಳಿಸಿದ್ದಾರೆ, ಅದಕ್ಕೆ ನಮ್ಮ ಅಭಿಪ್ರಾಯ ತಿಳಿಸಬೇಕು, ಆ ಕೆಲಸ ಮಾಡುತ್ತಿದ್ದಾರೆ.

ಶ್ರೀ ಬಿ. ಎನ್. ರಾಮೇಗೌಡ.—ಇದಕ್ಕೆ ಆಂಧ್ರ ಸರಕಾರದ ಸಂಬಂಧವೂ ಇದೆಯಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—1892 ರ ಅಗ್ರಿಮೆಂಟ್ ಪ್ರಕಾರ ಈ ಕೆಲಸ ತೆಗೆದುಕೊಳ್ಳಬೇಕು. ಮೊದಲು ಇದು ಮದ್ರಾಸಿಗೆ ಸಂಬಂಧಪಟ್ಟಿತ್ತು, ಆಂಧ್ರ ಪ್ರದೇಶವಾದ ಮೇಲೆ ಅದಕ್ಕೆ ಈಗ ಸಂಬಂಧಪಟ್ಟಿದೆ. ಈ ಪ್ರಾಜೆಕ್ಟಿನಿಂದ ಅನೇಕ ಹಳ್ಳಿಗಳ ಮುಳುಗಡೆ ಆಂಧ್ರ ಪ್ರದೇಶದಲ್ಲಿ ಆಗುವುದರಿಂದ ಇದಕ್ಕೆ ಆಂಧ್ರದ ಒಪ್ಪಿಗೆಯಿಲ್ಲದೆ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅವರ ಒಪ್ಪಿಗೆ ಪಡೆಯಬೇಕಾಗುತ್ತದೆ.

ಶ್ರೀ ಬಿ. ಎನ್. ರಾಮೇಗೌಡ.—ಇದಕ್ಕೆ ಸರಕಾರ ಪ್ರಯತ್ನಮಾಡಿದೆಯೇ ?

ಶ್ರೀ ಡಿ. ಪರಮೇಶ್ವರಪ್ಪ.—ಪ್ರಯತ್ನ ಮಾಡುತ್ತಿದೆ.

Rehabilitation of Sharavathy Project

808. Sri K. H. SRINIVASA (Sagar).—

Will the Chief Minister be pleased to state :—

(*a*) the total amount contemplated in respect of rehabilitation in the Sharavathy Project ;

(*b*) the amount spent so far on rehabilitation ;

(*c*) the details of the rehabilitation measures undertaken and the results achieved at present ?

Sri D. PARAMESHWARAPPA (Deputy Minister for Major Irrigation and Electricity) [On behalf of Sri VEERENDRA PATIL (Chief Minister)].—

(*a*) Rs. 54,00,000.

(*b*) Rs. 36,25,288.

(*c*) *Vide* Note appended.

NOTE

25 colonies have been formed and 20 wells and 18 school buildings have been constructed.

61 works relating to restoration of tanks have been completed and 18 works are under consideration.

(SRI D. PARAMESHWARAPPA)

Forest lands have been released to the displaced persons for agricultural purposes and an amount of Rs. 9,89,064 has been spent for bulldozing of these lands.

1800 families have been transported to other places free of cost.

Regarding shifting of temples, the question of approving the type designs for new temples to be put up is under consideration of Government in Revenue Department.

A sum of Rs. 4,42,397 has been spent on approach roads and further estimates amounting Rs. 2,11,000 have been sanctioned and works are under progress.

On miscellaneous works, an amount of Rs. one lakh has been spent.

ಶ್ರೀ ಕೆ. ಎಚ್. ಶ್ರೀನಿವಾಸ.—25 ಕಾಲೋನಿಗಳಲ್ಲಿ ಎಷ್ಟರಲ್ಲಿ ಜನರು ಬಂದು ಈಗ ನೆಲಸಿದ್ದಾರೆ.

ಶ್ರೀ ಡಿ. ಪರಮೇಶ್ವರಪ್ಪ.—20 ಕಾಲೋನಿಗಳಲ್ಲಿ ಈಗ ಜನರು ಬಂದು ನೆಲಸಿದ್ದಾರೆ.

ಶ್ರೀ ಕೆ. ಎಚ್. ಶ್ರೀನಿವಾಸ.—ಪುನರ್ವಸತಿ ಕಾರ್ಯಕ್ಕೆ 18 ಲಕ್ಷ ರೂಪಾಯಿ ಖರ್ಚಾಗ ಬೇಕು. ಎಷ್ಟು ಸಮಯದಲ್ಲಿ ಅದನ್ನು ಖರ್ಚುಮಾಡಲಾಗುವುದು? ಇವತ್ತು ಐಸೊಲೇಷೆಡ್ ಮತ್ತು ಅನ್‌ಎಕನಾಮಿಕ್ ಬಿಟ್ಸ್ ಕ್ಲೀಯರ್ ಮಾಡಲು ಸಮಿತಿಯನ್ನು ಮುಂದುವರಿಸಲಾಗುವುದೆ? ಅಲ್ಲದೆ ಫಾರೆಸ್ಟ್ ಜಮೀನು ರೀಲೀಸ್ ಮಾಡಿರುವ 9 ಸಾವಿರ ಎಕರೆಯಲ್ಲಿ 4 ಸಾವಿರ ಎಕರೆಯನ್ನು ಹ್ಯಾಂಡೋವರ್ ಮಾಡಿಲ್ಲ. ಅಲ್ಲಿ ಪುನರ್ವಸತಿಯ ದೃಷ್ಟಿಯಿಂದ ನೆಲಸುವವರನ್ನು ಅರಣ್ಯ ಇರಾಜೆ ಎವಿಕ್ಟ್ ಮಾಡುತ್ತಿದೆ. ಇದರ ಬಗ್ಗೆ ಏನು ಕ್ರಮ ಕೈಕೊಳ್ಳಲಾಗಿದೆ? ಕಾಲೋನಿಗಳಲ್ಲಿ ನೆಲಸದೆ ಬೇರೆ ಕಡೆ ನೆಲಸಿರುವವರಿಗೆ ಯಾವುದೇ ಅನುಕೂಲ ಕೊಡುತ್ತಿಲ್ಲ. ಅವರಿಗೆ ಬೇಕಾದ ಅನುಕೂಲ ಕೊಡುತ್ತೀರಾ?

ಉಪಾಧ್ಯಕ್ಷರು.—ಒಂದೊಂದಾಗಿ ಕೇಳಿ.

ಶ್ರೀ ಕೆ. ಎಚ್. ಶ್ರೀನಿವಾಸ.—ಜೈನ್ ಟೆಂಪಲ್ಸ್ ಕೆಲವು ಅಕ್ಸೆಪ್ಟರ್ ಆಗಿವೆ. ಅವನ್ನು ಮತ್ತೊಂದು ಕಡೆಗೆ ಬದಲಾಯಿಸಲೇಬೇಕಾಗಿದೆ. ಅದಕ್ಕೆ ಪ್ರತಿಬಂಧಕ ಬಂದಿದೆ. ತಾವು ಟೈಪ್ ಡಿಸೈನ್ ಪ್ರಕಾರ ಕಟ್ಟಬೇಕೆಂದು ಹೇಳುತ್ತಾ ಇದ್ದೀರಿ, ಆದರೆ ಭಕ್ತಾದಿಗಳು ಅವರ ಧರ್ಮನಂಪ್ರದಾಯಕ್ಕನುಸಾರವಾಗಿ ಕಟ್ಟಬೇಕೆಂದು ಆಶಪಡುತ್ತಾರೆ. ಆದ್ದರಿಂದ ಕಾಂಪೆನ್‌ಸೇಷನ್ ಹಣ ಏನಿದೆ ಅದನ್ನು ಜವಾಬ್ದಾರರಾಗಿರತಕ್ಕ ಭಕ್ತಾದಿಗಳಿಗೆ ಕೊಟ್ಟರೆ ಉಳಿದ ಹಣದ ಅವಶ್ಯಕತೆ ಇದ್ದರೆ ಅದನ್ನು ಅವರೇ ಹಾಕಿ ಕಟ್ಟಲಿಕ್ಕೆ ತಯಾರಾಗಿದ್ದಾರೆ, ಹತ್ತು ವರ್ಷವಾದರೂ ಈ ಬಗ್ಗೆ ಇನ್ನೂ ನಿರ್ಧಾರವಾಗಿಲ್ಲ, ಇದರ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕೆಂದು ಮೊನ್ನೆದಿನ ಮುಖ್ಯಮಂತ್ರಿಗಳಿಗೆ ಒಂದು ಮನವಿಯನ್ನೂ ಕೂಡ ನಲ್ಲಿಸಿದ್ದೇನೆ. ಇತ್ತೀಚಿನ ಹೈಕೋರ್ಟ್ ತೀರ್ಮಾನದ ಪ್ರಕಾರ ಇದನ್ನು ರೀ ಓಪನ್ ಮಾಡಬೇಕೆಂದು ಪ್ರಯತ್ನ ಮಾಡುತ್ತಾ ಇದ್ದಾರೆ, ರೀ ಓಪನ್ ಮಾಡಬಾರದು. ಇದನ್ನು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತೀರಾ?

ಶ್ರೀ ಡಿ. ಪರಮೇಶ್ವರಪ್ಪ.—ಮಾನ್ಯ ಶ್ರೀನಿವಾಸರವರು 4—5 ಪ್ರಶ್ನೆಗಳನ್ನು ಕೇಳಿದ್ದಾರೆ. ಈಗ ನಾವು ಈ ಪ್ಯಾಜೆಕ್ಟ್‌ನಲ್ಲಿ 54 ಲಕ್ಷ ರೂಪಾಯಿಗಳನ್ನು ರೀಹ್ಯಾಬಲಿಟೇಷನ್ ಪರಪಸ್‌ಗಾಗಿ ತೆಗೆದಿಟ್ಟಿದ್ದೇವೆ. ಕೊನೇಪಕ್ಷ 20 ಫ್ಯಾಮಿಲಿಗಳಾದರೂ ಬಂದರೆ ಒಂದು ಕಾಲೋನಿ ಮಾಡಬೇಕೆಂಬ ಒಂದು ಸ್ಟ್ಯಾಂಡರ್ಡ್‌ನ್ನು ಇಟ್ಟುಕೊಂಡಿದ್ದೇವೆ. ಅನೇಕ ಫ್ಯಾಮಿಲಿಗಳು ಹೋಗಲಿಲ್ಲ. ಬಹುಶಃ ಅವರಿಗೆ ಅಲ್ಲೇ ಜಮೀನು ಸಿಕ್ಕಿ ಅಲ್ಲೇ ಮನೆ ಕಟ್ಟಿಕೊಂಡು ವಾಸಮಾಡುವುದಕ್ಕೆ ಶುರುಮಾಡಿದರು, ಹೀಗಾಗಿ ಸ್ಟ್ಯಾಂಡರ್ಡ್‌ಗೆ ಒಳಪಟ್ಟು ಕಾಲೋನಿಗಳು ಆಗದೇ ಹೋಯಿತು, ಇದು ಒಂದು ಕಾರಣ ನಂತರ ಕಾಲೋನಿ ಅದಕಡೆ ಸ್ಕೂಲ್ ಕಟ್ಟಡ, ಕಮ್ಯೂನಿಟಿ ಹಾಲ್, ರೋಡ್ಸ್ ವಗೈರೆ ಮಾಡಿ ಕೊಟ್ಟಿದ್ದೇವೆ. ಅವರು ಟೆಂಪಲ್ ವಿಷಯ ಹೇಳಿದರು. ಬಹುಶಃ ಜೈನ ಮತಧರ್ಮದಂತೆ ಕಟ್ಟಿಸಿ ಕೊಡಬೇಕೆಂದು ಹೇಳಿದರು. ಈ ಪ್ರಶ್ನೆ ಬಹಳ ಜಟಿಲವಾದ ಪ್ರಶ್ನೆ ಏಕೆಂದರೆ...

ಶ್ರೀ ಕೆ. ಎಚ್. ಶ್ರೀನಿವಾಸ.—ಇವತ್ತು ಜೈನ್ ಟೆಂಪರ್ಸ್ ಅವರ ಭಕ್ತಾದಿಗಳಿಂದ ಮ್ಯಾನೇಜ್ ಆಗುತ್ತಾ ಇದ್ದು ಅವು ಅಕ್ಸೆಪ್ಟರ್ ಆಗಿವೆ, ಕಾಂಪನ್‌ಸೇಷನ್ ಅಮೌಂಟ್ ಸರ್ಕಾರದ ಕೈಯಲ್ಲಿ ಇದೆ. ಇವತ್ತು ಭಕ್ತಾದಿಗಳು ಹೇಳುತ್ತಾರೆ, ನಮ್ಮ ಮತ ಧರ್ಮದ ಪ್ರಕಾರ ಪ್ಲಾನ್ ಎಲ್ಲಿ ಪುನರ್ ವ್ಯವಸ್ಥೆ ಆಗಿದೆಯೋ ಅಲ್ಲಿ ಮಧ್ಯಪ್ರದೇಶದಲ್ಲಿ ಕಟ್ಟಿಕೊಳ್ಳುತ್ತೇವೆ, ಕಾಂಪನ್‌ಸೇಷನ್ ಮೊತ್ತವನ್ನು ನಮಗೇ ಕೊಡಿ ಉಳಿದದ್ದನ್ನು ಅವಶ್ಯಕ ಇದ್ದರೆ ನಾವೇ ಹಾಕಿಕೊಳ್ಳುತ್ತೇವೆ ಎಂದು, ಸರ್ಕಾರ ಕಟ್ಟಿಸಬೇಕೆಂದು ಹೇಳುತ್ತಾ ಇಲ್ಲ. ಇದನ್ನು ಅವರಿಗೆ ಕೊಡದೇ ಟೈಪ್ ಡಿಸ್ಟೈನ್—ಪಿಡಬ್ಲ್ಯುಡಿಯದು ಏನಿದೆ ಅದರ ಪ್ರಕಾರವೇ ದೇವಸ್ಥಾನ ಕಟ್ಟಿ ಎಂದು ತಾವು ಒತ್ತಾಯ ಮಾಡುತ್ತಾ ಇದ್ದೀರಿ.

ಶ್ರೀ ಡಿ. ಪರಮೇಶ್ವರಪ್ಪ.—ಇದರಲ್ಲಿ ಒಂದು ಸ್ಟ್ಯಾಂಡರ್ಡ್ ಇಟ್ಟುಕೊಳ್ಳಬೇಕಾಗುತ್ತದೆ, ಏಕೆಂದರೆ ಮಾನ್ಯನದಸ್ಯರು ಹೇಳಿದಹಾಗೆ ಕೆಲವು ಟೆಂಪಲ್ಸ್ ಬಗ್ಗೆ ಕಾಂಪನ್‌ಸೇಷನ್ ಅಮೌಂಟ್ ಕಡಿಮೆ ಆಗಬಹುದು ಕೆಲವು ಟೆಂಪರ್‌ಗಳಿಗೆ ಜಾಸ್ತಿಯಾಗಬಹುದು. ಇದರಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ ಏನೆಂದರೆ ಕಾಂಪನ್‌ಸೇಷನ್ ಅಮೌಂಟನ್ನು ಅವರಿಗೆ ಕೊಟ್ಟರೆ ಬಾಕಿ ಉಳಿದದ್ದನ್ನು ಭಕ್ತಾದಿಗಳು ಹಾಕಿಕೊಂಡು ಒಳ್ಳೆಯ ಕಟ್ಟಡವನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ ಅಂತ ಅನ್ನುವುದು ಬಹುಶಃ ಸೂಕ್ತವಾದ ನಲಹೆ ಎಂದು ಕಾಣುತ್ತದೆ. ಏಕೆಂದರೆ ಕಾಂಪನ್‌ಸೇಷನ್ ಹಣವನ್ನು ಅವರಿಗೆ ಕೊಡಬೇಕಾದ್ದನ್ನು ಕೊಡುತ್ತೇವೆ, ಭಕ್ತಾದಿಗಳು ಬಾಕಿ ಹಣವನ್ನು ಹಾಕಿ ದೇವಸ್ಥಾನವನ್ನು ಕಟ್ಟುತ್ತೇವೆ ಎಂದು ಯಾರಾದರೂ ಮುಂದೆ ಬಂದರೆ ಅದಕ್ಕೆ ಬಹುಶಃ ಸರ್ಕಾರದ ಯಾವ ಅಬ್ಜಕ್ಷನ್ನೂ ಇಲ್ಲ ಅಂತ ಕಾಣುತ್ತದೆ.

ಶ್ರೀ ಐ. ಸೋಮಶೇಖರಪ್ಪ.—ಪುನರ್ವಸತಿ ನಿರ್ಮಾಣಕ್ಕಾಗಿ ತೆಗೆದಿಟ್ಟಿದ್ದ ಹಣದಲ್ಲಿ ಇನ್ನೂ 18 ಲಕ್ಷ ರೂಪಾಯಿಗಳು ಹಾಗೇ ಉಳಿದಿದೆ. ಆ ಹಣವನ್ನೆಲ್ಲಾ ಇನ್ನೆಷ್ಟು ದಿವಸಗಳಲ್ಲಿ ಖರ್ಚು ಮಾಡುತ್ತೀರಿ.

ಎರಡನೆಯದಾಗಿ ಇನ್ನು ಆರು ತಿಂಗಳೊಳಗಾಗಿ ಸಾಗರ–ಹೊಸನಗರ ಸರ್ಕಿಟಿಜನ್ ಮುಚ್ಚ ಬೇಕೆಂದು ಆಜ್ಞೆ ಹೊರಡಿಸಿದ್ದಾರೆ. ಅಷ್ಟರಲ್ಲಿ ಅಲ್ಲಿ ಉಳಿದಿರತಕ್ಕ ರೀ ಹ್ಯಾಬಿಲಿಟೇಷನ್ ಕೆಲಸಗಳನ್ನೆಲ್ಲಾ ಮುಗಿಸುವುದಕ್ಕಾಗುತ್ತದೆಯೇ ?

ಮತ್ತು ಈ ಸಂಬಂಧದಲ್ಲಿ ಚೀಫ್ ಇಂಜಿನಿಯರ್ ಅವರ ಬಳಿ ಎಷ್ಟು ಅಂದಾಜುಗಳು ಉಳಿದಿರುತ್ತವೆ, ಆ ಅಂದಾಜುಗಳ ಹಣ ಎಷ್ಟಾಗುತ್ತದೆ ? ತಿಳಿಸಿ.

ಶ್ರೀ ಡಿ. ಪರಮೇಶ್ವರಪ್ಪ.—ಚೀಫ್ ಇಂಜಿನಿಯರವರ ಬಳಿ ಎಷ್ಟು ಅಂದಾಜುಗಳು ಮತ್ತು ಹಣ ಉಳಿದಿದೆ ಅನ್ನತಕ್ಕ ವಿವರಗಳು ಸಭ್ಯಕ್ಕೆ ನನ್ನಲ್ಲಿ ಇಲ್ಲ. ಇನ್ನು ಮಾನ್ಯ ನದಸ್ಯರು ಅಲ್ಲಿ ಉಳಿದಿರತಕ್ಕ 18 ಲಕ್ಷ ರೂಪಾಯಿಗಳನ್ನು ಎಷ್ಟು ದಿನಗಳಲ್ಲಿ ಖರ್ಚುಮಾಡುತ್ತೀರೆಂದು ಕೇಳಿದ್ದಾರೆ. ಅಲ್ಲಿ ಹಣವನ್ನು ಖರ್ಚುಮಾಡುವುದು ಮಾನ್ಯ ನದಸ್ಯರಿಗೆ ಗೊತ್ತಿರುವ ಹಾಗೆ ಯಾವ ಯಾವ ಸಮಸ್ಯೆಗಳು ಉದ್ಭವಿಸುತ್ತವೆಯೋ ಆಗಾಗ ಆ ಸಮಸ್ಯೆಗಳಿಗೆ ತಕ್ಕಹಾಗೆ ಹಣವನ್ನು ಖರ್ಚುಮಾಡಲಾಗುತ್ತದೆ. ಹಾಗೆ ಖರ್ಚುಮಾಡಬೇಕಾದ ಸಮಸ್ಯೆಗಳು ಉದ್ಭವಿಸದಿದ್ದಾಗ ಹಣವನ್ನು ಖರ್ಚುಮಾಡುವುದಿಲ್ಲ. ಬೇಡಿಕೆಗಳು ಬಾರದೆ ಹಣವನ್ನು ಖರ್ಚುಮಾಡತಕ್ಕದ್ದು ಸರಿಯಾದ್ದಲ್ಲ, ಹಾಗೆ ಖರ್ಚು ಮಾಡುವುದೂ ಇಲ್ಲ.

ಶ್ರೀ ಎ. ಆರ್. ಬದರಿನಾರಾಯಣ್. —ಶ್ರೀಮಾನ್ ಶ್ರೀನಿವಾಸ್ ಮತ್ತು ಸೋಮಶೇಖರಪ್ಪ ಇವರಿಬ್ಬರೂ ಆ ರೀಹ್ಯಾಬಿಲಿಟೇಷನ್ ಕಮಿಟಿಯಲ್ಲಿ ನದಸ್ಯರಾಗಿದ್ದಾರೆ. ಅವರ ಸಲಹೆಗಳಿಗೆ ಹೆಚ್ಚಿನ ಗಮನ ಕೊಡುವುದು ಸೂಕ್ತವಲ್ಲವೇ ?

ಶ್ರೀ ಡಿ. ಪರಮೇಶ್ವರಪ್ಪ.—ನಿಜ. ಇಬ್ಬರೂ ಇದ್ದಾರೆ. ಅವರ ಸಲಹೆಗಳನ್ನು ಸರ್ಕಾರ ಅಂಗೀಕಾರ ಮಾಡುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸ್ಪೀಕರ್, ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಇದಕ್ಕೆ ತಾವು ಕಾಲಾವಕಾಶವನ್ನು ಹೆಚ್ಚು ಮಾಡಬೇಕು.

Sri D. PARAMESWARAPPA.—If I can suggest, the hon. Members consider this as an important question because it pertains to rehabilitation of so many people. Sir, in view of the fact that time is short, I think you have the discretion to hold over the Question tomorrow.

Mr. DEPUTY SPEAKER.—Question is held over.